ಜಿಲ್ಲಾ ಮಿಡಿತ

ಆರೋಗ್ಯ ತಪಾಸಣಾ ಶಿಬಿರ

ಮಂಗಳೂರು: ಲಯನ್ಸ್ ಕ್ಲಬ್ ಮಂಗಳೂರು ಮಿಡ್ ಟೌನ್, ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜು ಆಸ್ಪತ್ರೆ ಇವುಗಳ ವತಿಯಿಂದ ನ.4ರಂದು ಕಾವೂರು ಜ್ಯೋತಿನಗರ ವಿದ್ಯಾಜ್ಯೋತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಲಯನ್ಸ್ ಜಿಲ್ಲಾ ಸಂಘಟಕ ಸಿ.ಸಿ.ಪಿಲಿಫ್ ಹೇಳಿದ್ದಾರೆ.

ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬೆಳಿಗ್ಗೆ 9.30ಕ್ಕೆ ಶಿಬಿರ ಉದ್ಘಾಟನೆಗೊಳ್ಳಲಿದೆ. ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜಿನ ನಿರ್ದೇಶಕ ಫಾ.ಡೆನಿಸ್ ಡಿಸೋಜ ಅಧ್ಯಕ್ಷತೆ ವಹಿಸಲಿದ್ದು, ಲಯನ್ಸ್ ಜಿಲ್ಲಾ ಗವರ್ನರ್ ಎಂ.ಬಿ. ಸದಾಶಿವ ಮುಖ್ಯ ಅತಿಥಿಗಳಾಗಿರುವರು ಎಂದರು.

ಶಿಬಿರದಲ್ಲಿ ಜನರಲ್ ಮೆಡಿಸಿನ್ ವಿಭಾಗ ಹಾಗೂ ಸಾಮಾನ್ಯ ರೋಗಗಳು, ಮಕ್ಕಳ ಆರೋಗ್ಯ ಚಿಕಿತ್ಸೆ, ಗರ್ಭಿಣಿ ಸ್ತ್ರೀಯರ ಆರೋಗ್ಯ ತಪಾಸಣೆ, ಚರ್ಮರೋಗ, ಕಣ್ಣು ತಪಾಸಣೆ, ಶಸ್ತ್ರಚಿಕಿತ್ಸಾ ವ್ಯವಸ್ಥೆ, ಇಎನ್‌ಟಿ ತಪಾಸಣೆ, ರಿಯಾಯಿತಿ ದರದಲ್ಲಿ ಫಾ.ಮುಲ್ಲರ್ ಹೆಲ್ತ್ ಕಾರ್ಡ್ ವಿತರಣೆ ಮತ್ತಿತರ ಪರೀಕ್ಷೆಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಜಿಲ್ಲೆಯ 40ಅಂಗನವಾಡಿ ಕೇಂದ್ರಗಳಿಂದ ವಾಹನ ವ್ಯವಸ್ಥೆಗೊಳಿಸಲಾಗಿದೆ. ಹೆಚ್ಚಿನ ಮಾಹಿತಿಗೆ 9740555391, 9964142750 ಸಂಪರ್ಕಿಸಬಹುದು ಎಂದರು.

ಗೋಷ್ಠಿಯಲ್ಲಿ ಪಿ.ಜೆ.ಜೋಸ್, ಡಾ.ದಾಸ ಆಚಾರ್ಯ, ಡಾ.ಆರ್.ಪಿ. ಪೈ ಉಪಸ್ಥಿತರಿದ್ದರು.

ಸಾಹಿತ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬಂಟ್ವಾಳ: ಇಲ್ಲಿನ ತುಂಬೆ ಕಡೆಗೋಳಿಯ ನಿರತ ಸಾಹಿತ್ಯ ಸಂಪದವು ಕೊಡಮಾಡುವ ನಿರತ ಸಾಹಿತ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

2007 ರಿಂದ 2012ರ ಅಕ್ಟೋಬರ್ ತಿಂಗಳವರೆಗೆ ಮುದ್ರಣಗೊಂಡ ಲೇಖಕರ ಮಕ್ಕಳ ಕಥಾ ಸಂಕಲನ ಕೃತಿಗೆ ಪ್ರಶಸ್ತಿ ಕೊಡಲು ನಿರ್ಧರಿಸಲಾಗಿದೆ. ರಾಜ್ಯ ಹಾಗೂ ಅಂತರ್‌ರಾಜ್ಯದ ಲೇಖಕರು ಕೃತಿಗಳನ್ನು ಕಳುಹಿಸಬಹುದು. ಪ್ರಶಸ್ತಿಯು ಕನ್ನಡ ಭಾಷೆ ಕೃತಿಗೆ ಮಾತ್ರ ಸೀಮಿತವಾಗಿದೆ.

ಕೃತಿಯ ಮೂರು ಪ್ರತಿಗಳು, ಪರಿಚಯ ಪತ್ರವನ್ನು ನ.11ರೊಳಗೆ ದಿನೇಶ್ ಎನ್.ತುಂಬೆ, ನಿರತ ಸಾಹಿತ್ಯ ಸಂಪದ, ಕಡೆಗೋಳಿ ತುಂಬೆ ಬಂಟ್ವಾಳ ತಾಲೂಕು ದ.ಕ- 574143 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮಾಹಿತಿಗೆ 9535522717, 9480878094 ಸಂಪರ್ಕಿಸಬಹುದು.

ನ.7: ಕುಮಾರಸ್ವಾಮಿ ಸುಳ್ಯಕ್ಕೆ

ಸುಳ್ಯ: ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ನ.7ರಂದು ಸುಳ್ಯಕ್ಕೆ ಆಗಮಿಸಲಿದ್ದಾರೆ. ಶ್ರೀ ಚೆನ್ನಕೇಶವ ದೇವಸ್ಥಾನದ ಮುಂಭಾಗದಲ್ಲಿ ನಡೆಯುವ ಸಾಮರಸ್ಯ-ಸ್ವಾಭಿಮಾನ ಸಮಾವೇಶವನ್ನು ಉದ್ಘಾಟಿಸುವರು. ಈ ಸಂದರ್ಭದಲ್ಲಿ ಜೆಡಿಎಸ್ ತಾಲೂಕು ಕಚೇರಿಯನ್ನೂ ಉದ್ಘಾಟಿಸಲಿದ್ದಾರೆ.

ಶಾಸಕ ಜಮೀರ್ ಅಹಮ್ಮದ್ ಖಾನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಕುಮಾರ್, ರಾಜ್ಯ ಉಪಾಧ್ಯಕ್ಷ ನಾಗರಾಜ ಶೆಟ್ಟಿ, ಯುವಜನತಾದಳದ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ, ಜಿಲ್ಲಾಧ್ಯಕ್ಷ ಎಂ.ಬಿ.ಸದಾಶಿವ, ಚಿತ್ರ ನಟಿ ಪೂಜಾ ಗಾಂಧೀ, ಪ್ರಧಾನ ಕಾರ್ಯದರ್ಶಿ ನಂದಿನಿ ಗೌಡ ಮತ್ತಿತರರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ದೇವಚಳ್ಳ, ಕಲ್ಮಡ್ಕ ಮತ್ತು ಸುಳ್ಯದಲ್ಲಿ ಕಾರ್ಯಕರ್ತರ ಸಭೆಯಲ್ಲಿ ಕುಮಾರಸ್ವಾಮಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ವ್ಯವಸ್ಥಾಪನಾ ಸಮಿತಿಗೆ ಆಯ್ಕೆ

ಸುಬ್ರಹ್ಮಣ್ಯ: ಎಡಮಂಗಲ ಗ್ರಾಮದ ಕೇರ್ಪಡ ಶ್ರೀ ಮಹಿಷಮರ್ದಿನಿ ದೇವಸ್ಥಾನದ ನೂತನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ವಸಂತ ಗೌಡ ನಡುಬೈಲು ನೇಮಕಗೊಂಡಿದ್ದಾರೆ.

ವಸಂತ ಗೌಡ

ಸದಸ್ಯರಾಗಿ ರೂಪರಾಜ ರೈ ಪಜಿಂಬಿಲ, ವೆಂಕಪ್ಪ ಗೌಡ ಆಲಾಜೆ, ಪದ್ಮನಾಭ ರೈ ಎಂಜೀರು, ನವೀನ್ ಕುಮಾರ್ ಬಿ.ಎಸ್., ಜಾನಕಿ ಎಸ್.ಜಿ., ಉಷಾ ಜಿ. ರೈ ಕಟ್ಟಬೀಡು, ಕಮಾಲಾಕ್ಷಿ ಕರ್ಂಬಿಲ, ಪ್ರಧಾನ ಅರ್ಚಕ ರಾಘವೇಂದ್ರ ಬೈಪಡಿತ್ತಾಯ ನೇಮಕಗೊಂಡಿದ್ದಾರೆ.

ಕೇರ್ಪಡ ಶ್ರೀ ಮಹಿಷಮರ್ದಿನಿ ದೇವಸ್ಥಾನದಲ್ಲಿ ಉತ್ಸವ

ಧರ್ಮ ರಕ್ಷಣೆಯಿಂದ ಸಮಾಜದ ಉನ್ನತಿ

ಕೃಷ್ಣಪ್ರಸಾದ್ ಮಡ್ತಿಲ 'ಕೇರ್ಪಡ ತುಡಾರ್' ಸಂಚಿಕೆಯನ್ನು ಬಿಡುಗಡೆಗೊಳಿಸಿದರು.

ಸುಬ್ರಹ್ಮಣ್ಯ: ಧರ್ಮ, ಸಂಸ್ಕೃತಿಗಳು ಸನಾತನ ಧರ್ಮದ ಮೂಲವಾಗಿದೆ. ಇದು ಜಗತ್ತಿನ ಶ್ರೇಷ್ಠ ಧರ್ಮವಾಗಿದ್ದು, ಸಕಲ ಜನರೂ ಸುಖವಾಗಿರಲಿ ಎಂಬ ಧ್ಯೇಯವನ್ನು ಒಳಗೊಂಡ ಶ್ರೇಷ್ಠ ಸಿದ್ಧಾಂತವನ್ನು ಸಾರುತ್ತದೆ. ಸರ್ವರು ಧರ್ಮವನ್ನು ರಕ್ಷಣೆ ಮಾಡುವ ಕಾರ್ಯವನ್ನು ತಮ್ಮ ಧ್ಯೇಯವನ್ನಾಗಿಸಬೇಕು. ನಾವು ಧರ್ಮವನ್ನು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ ಎಂದು ಕರ್ನಾಟಕ ಯುವ ಭಾರತ್‌ನ ರಾಜ್ಯಾಧ್ಯಕ್ಷ ನಚಿಕೇತ್ ಹೇಳಿದ್ದಾರೆ.

ಅವರು ಎಡಮಂಗಲ ಗ್ರಾಮದ ಕೇರ್ಪಡ ಶ್ರೀ ಮಹಿಷಮರ್ದಿನಿ ದೇವಸ್ಥಾನದಲ್ಲಿ ನಡೆದ ಕೇರ್ಪಡ ಉತ್ಸವದಲ್ಲಿ ಧಾರ್ಮಿಕ ಭಾಷಣ ಮಾಡಿದರು. ನಮ್ಮ ಸಂಸ್ಕೃತಿ, ಸಂಸ್ಕಾರ ಹಾಗೂ ಸಂಪ್ರದಾಯಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಯುವಜನತೆ ಹೆಚ್ಚಿನ ಶ್ರಮ ಪಡಬೇಕಾಗಿರುವುದು ಇಂದು ಅನಿವಾರ್ಯವಾಗಿದೆ. ಆಧುನಿಕ ಯುಗದ ಜಂಜಾಟದಲ್ಲಿ ಪ್ರಾಚೀನ ಸಂಸ್ಕಾರಗಳನ್ನು ಮರೆತು ಜೀವಿಸುವ ಈ ಕಾಲದಲ್ಲಿ ಮತ್ತೆ ನಮ್ಮ ಸಂಸ್ಕಾರಗಳು ಮನೆಮನಗಳಲ್ಲಿ ಬೆಳಗುವಂತೆ ಮಾಡಬೇಕಾಗಿವೆ ಎಂದರು.

ಶಾಸಕ ಎಸ್.ಅಂಗಾರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೃಷ್ಣಪ್ರಸಾದ್ ಮಡ್ತಿಲ 'ಕೇರ್ಪಡ ತುಡಾರ್' ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವಸಂತ ಗೌಡ ನಡುಬೈಲು, ಸಂಚಿಕೆಯ ಪ್ರಧಾನ ಸಂಪಾದಕ ನಾರಾಯಣ ಬೊಳ್ಳಾಜೆ ಮತ್ತಿತರರಿದ್ದರು.

'ಶ್ರೀನಾರಾಯಣ ಗುರು ಶ್ರೇಷ್ಠ ಸಮಾಜ ಸೇವಾ' ಪ್ರಶಸ್ತಿಗೆ ಆಹ್ವಾನ

ಮಂಗಳೂರು: ಸಮಾಜದಲ್ಲಿ ದೀನ ದಲಿತರ ಅಭಿವೃದ್ಧಿಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿ , ಗಣನೀಯ ಸಮಾಜ ಸುಧಾರಣೆಗೆ ಕಾರಣರಾದ ಓರ್ವ ಉತ್ತಮ ಸಮಾಜ ಸೇವಕ-ಸೇವಕಿ ಅಥವಾ ಸಂಸ್ಥೆಗೆ ಶ್ರೀ ಗುರು ಚಾರಿಟೇಬಲ್ ಟ್ರಸ್ಟ್‌ನಿಂದ ಈ ಬಾರಿಯೂ 'ಶ್ರೀ ನಾರಾಯಣ ಗುರು ಶ್ರೇಷ್ಠ ಸಮಾಜ ಸೇವಾ' ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಈ ವರ್ಷದ ಪ್ರಶಸ್ತಿಗಾಗಿ ಓರ್ವ ಯೋಗ್ಯ ವ್ಯಕ್ತಿ ಅಥವಾ ಸಂಘಟನೆಯನ್ನು ರಾಷ್ಟ್ರಮಟ್ಟದಲ್ಲಿ ಅವರ ಸೇವಾ ಕಾರ್ಯಗಳ ಕುರಿತು ನ.25ರೊಳಗೆ ವಿವರವಾದ ಮಾಹಿತಿ ನೀಡಬೇಕು.

ಸದಾನಂದ ಸುವರ್ಣ ಪ್ರಾಯೋಜಕತ್ವದ ಈ ಪ್ರಶಸ್ತಿ ರೂ.10 ಸಾವಿರ ನಗದು, ಪ್ರಮಾಣಪತ್ರ ಹಾಗೂ ಸ್ಮರಣಿಕೆ ಒಳಗೊಂಡಿದ್ದು, ಇದನ್ನು ಡಿಸೆಂಬರ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು.

ಹೆಚ್ಚಿನ ಮಾಹಿತಿಗೆ ಶ್ರೀ ಗುರು ಚಾರಿಟೇಬಲ್ ಟ್ರಸ್ಟ್, ಕೋಸ್ಟಲ್ ಟವರ್ಸ್ ಬಿಲ್ಡಿಂಗ್, ಗೋವಿಂದದಾಸ ಕಾಲೇಜಿನ ಎದುರು, ಸುರತ್ಕಲ್, ಮಂಗಳೂರು -575014ನ್ನು ದೂ.ಸಂಖ್ಯೆ: 9448953344 ಅಥವಾ 9901895434 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ರಮಾ ಶಕ್ತಿ ಮಿಷನ್ನಿನಲ್ಲಿ ಹರಿಕಥಾ ಕೀರ್ತನ ಸಮಾರೋಪ

ಶ್ರೀ ಈಶ ವಿಠಲದಾಸ ಸ್ವಾಮೀಜಿ ಆಶೀರ್ವಚನ ನೀಡಿದರು

ಮಂಗಳೂರು: ಭ್ರಷ್ಟಾಚಾರ ರಹಿತ ಸಮಾಜ ನಿರ್ಮಾಣ ಅಧ್ಯಾತ್ಮದಿಂದ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ಯುವಜನತೆಯನ್ನು ಆಧ್ಯಾತ್ಮದೆಡೆಗೆ ಸೆಳೆಯಲು ಹರಿಕಥೆಯೇ ಸೂಕ್ತ ಮಾಧ್ಯಮವಾಗಿದ್ದು, ಪರಂಪರೆ ಸಂಸ್ಕೃತಿಗೆ ಧಕ್ಕೆಯಾಗದ ರೀತಿಯಲ್ಲಿ ಯುವಜನರನ್ನು ಸೆಳೆಯುವಂತಹ ರೀತಿಯಲ್ಲಿ ಹರಿಕಥಾ ಮಾಧ್ಯಮವನ್ನು ಬಳಸಿಕೊಳ್ಳಬೇಕು ಎಂದು ಸಾಂದೀಪನೀ ಹರಿಕಥಾ ಪರಿಷತ್ತಿನ ಶ್ರೀ ಈಶ ವಿಠಲದಾಸ ಸ್ವಾಮೀಜಿ ಕರೆ ನೀಡಿದ್ದಾರೆ.

ಅವರು ಶಕ್ತಿನಗರ ರಮಾ ಶಕ್ತಿ ಮಿಶನ್ನಿನಲ್ಲಿ ಹರಿಕಥಾ ಪರಿಷತ್ತಿನ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾದ ಶ್ರೀ ಮದ್ರಾಮಾಯಣ ಹರಿಕಥಾ ಕೀರ್ತನ ಯಜ್ಞದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹರಿದಾಸ ಅಂಬಾತನಯ ಮುದ್ರಾಡಿ, ಹರಿಕಥೆ ಇಂದು ಹೆಚ್ಚು ಯುವಜನತೆಯನ್ನು ಆಕರ್ಷಿಸುತ್ತಿದ್ದು, ಒಳ್ಳೆಯ ಮೌಲ್ಯಗಳನ್ನು ಕಲಿಸಿಕೊಡಲು ಉತ್ತಮ ಮಾಧ್ಯಮವಾಗಿದೆ ಎಂದರು.

ಹರಿಕಥಾ ಪರಿಷತ್ತಿನ ಅಧ್ಯಕ್ಷ ಕೆ.ಮಹಾಬಲ ಶೆಟ್ಟಿ, ಹರಿಕಥೆ ಇನ್ನಷ್ಟು ಜನರನ್ನು ತಲುಪಬೇಕಾದರೆ ದೇವಸ್ಥಾನಗಳ, ಸಂಘ ಸಂಸ್ಥೆಗಳ ಸಹಕಾರ ಅತೀ ಅಗತ್ಯ ಎಂದರು.

ಮಿಷನ್ನಿನ ಕಾರ್ಯದರ್ಶಿ ಎ.ಎಂ. ದೇವಯ್ಯ ಸ್ವಾಗತಿಸಿ, ಜಿ.ಆನಂದರಾಯ ಕಾಮತ್ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಎಸ್.ಪಿ.ಗುರುದಾಸ್ ನಿರೂಪಿಸಿದರು.

ಬಳಿಕ ಅಂಬಾತನಯ ಮುದ್ರಾಡಿಯವರಿಂದ ಯುದ್ಧಕಾಂಡ ಉತ್ತರಾರ್ಧ ಭಾಗದ ಹರಿಕಥೆ ನಡೆಯಿತು.

DISTRICT GOVERNOR'S OFFICIAL VISIT

ಮಂಗಳೂರು ಲಯನ್ಸ್ ಕ್ಲಬ್‌ಗೆ ಲಯನ್ಸ್ 317-ಡಿಯ ರಾಜ್ಯಪಾಲ ಎಂ.ಬಿ.ಸದಾಶಿವ ಅಧಿಕೃತವಾಗಿ ಭೇಟಿ ನೀಡಿ, ಕ್ಲಬ್‌ನ ಕೆಲಸ ಕಾರ್ಯಗಳನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಹರಿಣಿ ಸದಾಶಿವ, ಲಯನೆಸ್ ಜಿಲ್ಲಾ ಸಂಯೋಜಕಿ ಗೀತಾ ಆರ್.ಶೆಟ್ಟಿ, ಕ್ಲಬ್‌ನ ಅಧ್ಯಕ್ಷ ಕೇದಿಗೆ ಅರವಿಂದ ರಾವ್, ಪೂರ್ವ ರಾಜ್ಯಪಾಲ ಕಿಶೋರ್ ರಾವ್, ಕೆ.ಸಿ.ಪ್ರಭು, ದೇವದಾಸ್ ಭಂಡಾರಿ, ಎಸ್.ಎಂ.ಐರನ್, ಪಿ.ಆರ್.ಒ.ಆಗ್ನೇಲ್ ರಾಡ್ರಿಗಸ್, ನಾಗರಾಜ್ ಶರ್ಮ, ರಘುವೀರ್ ರಾವ್, ಪ್ರಾಂತ್ಯಧ್ಯಕ್ಷ ವೇಣುಗೋಪಾಲ್ ಶೆಣೈ , ವಲಯಾಧ್ಯಕ್ಷ ಗೋವರ್ಧನ್ ಕೆ.ಶೆಟ್ಟಿ , ಲಯನೆಸ್ ಅಧ್ಯಕ್ಷೆ ಗಾಯತ್ರಿ ರಾವ್ , ಲಿಯೋ ಅಧ್ಯಕ್ಷೆ ಡಾ.ಅಂಜಲಿ ರಾವ್ , ವಿಶಾಲ್ ಭಂಡರ್ಕಾರ್ ಮತ್ತಿತರರಿದ್ದರು.

ಆಳ್ವಾಸ್‌ನಲ್ಲಿ ಎಂಬಿಎ, ಎಂ.ಟೆಕ್ ತರಗತಿ ಆರಂಭ

ಮೂಡುಬಿದಿರೆ: ಮಿಜಾರಿನ ಆಳ್ವಾಸ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿ ಕಾಲೇಜಿನಲ್ಲಿ ಪ್ರಸಕ್ತ ಸಾಲಿನಿಂದ ಎಂ.ಟೆಕ್ ಕೋರ್ಸ್ ಮತ್ತು ಎಂ.ಬಿ.ಎ. ಹೊಸ ಬ್ಯಾಚ್‌ನ್ನು ಶುಕ್ರವಾರ ಉದ್ಘಾಟಿಸಲಾಯಿತು.

ಮಂಗಳೂರು ಎಂ.ಸಿ.ಎಫ್. ಸಂಸ್ಥೆಯ ಲರ್ನಿಂಗ್ ಎಂಡ್ ಡೆವಲಪ್‌ಮೆಂಟ್‌ನ ವ್ಯವಸ್ಥಾಪಕ ರಜನಿಕಾಂತ್ ಕೋರ್ಸ್‌ಗಳನ್ನು ಉದ್ಘಾಟಿಸಿ ಮಾತನಾಡಿ, ಕೋರ್ಸ್‌ನ ಪ್ರಾರಂಭದ ಹಂತದಲ್ಲಿ ಅಧ್ಯಯನದಲ್ಲಿ ತೊಡಗುವುದರ ಜತೆಗೆ ನಿರ್ದಿಷ್ಟ ಗುರಿಯನ್ನು ಸಾಧಿಸಲು ಕೋರ್ಸ್‌ನ ಕೊನೆಯ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆ ಇರಬೇಕು. ಆಕಾಡೆಮಿಯ ತರಗತಿ, ತರಬೇತಿಯೊಂದಿಗೆ ಪರಿಶ್ರಮ, ಇಚ್ಛಾಶಕ್ತಿಯಿದ್ದರೆ ಸಾಧನೆಗೆ ಸಹಕಾರಿಯಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ ಮೋಹನ್ ಆಳ್ವ ಮಾತನಾಡಿ, ಇಂದು ಔದ್ಯೋಗಿಕ ಕ್ಷೇತ್ರದಲ್ಲಿ ಸ್ಪರ್ಧೆ ಅನಿವಾರ್ಯವಾಗಿದೆ. ಇದನ್ನು ಎದುರಿಸಲು ಪರಿಪೂರ್ಣತೆಯ ಅಧ್ಯಯನ ಅಗತ್ಯ. ಶೈಕ್ಷಣಿಕವಾದ ಸಾಧನೆಯ ಜೊತೆಗೆ ಮಾನವೀಯ ಗುಣಗಳು ವಿದ್ಯಾರ್ಥಿಗಳಲ್ಲಿ ಹೆಚ್ಚಾಗಬೇಕು. ಸಣ್ಣ ಕೆಲಸದಿಂದಲೇ ಏಕಾಗ್ರತೆಯೊಂದಿಗೆ, ಸಾಮಾನ್ಯ ಜ್ಞಾನವನ್ನು ಸರಿಯಾದ ಸಮಯದಲ್ಲಿ ಉಪಯೋಗಿಸಿದಲ್ಲಿ ಸಾಧನೆ ಸುಲಭ. ಎಂ.ಟೆಕ್, ಎಂ.ಬಿ.ಎ. ಕಲಿತವರಿಗೆ ಇಂದು ವಿಪುಲ ಅವಕಾಶವಿದೆ ಎಂದರು.

ಸಂಸ್ಥೆಯ ಟ್ರಸ್ಟಿ ವಿವೇಕ್ ಆಳ್ವ, ಸಿ.ಎಸ್.ಇ. ವಿಭಾಗದ ಮುಖ್ಯಸ್ಥ ಪ್ರೊ.ಸಾಯೀಶ್, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಪ್ರೊ. ಕೆ.ವಿ.ಸುರೇಶ್, ಡೀನ್ ಪ್ರೊ. ಕಿಶೋರ್ ಶೆಟ್ಟಿ ಉಪಸ್ಥಿತರಿದ್ದರು.

ಪ್ರಾಂಶುಪಾಲ ಡಾ.ಪೀಟರ್ ಫೆರ್ನಾಂಡಿಸ್ ಪ್ರಸ್ತಾವನೆಗೈದರು. ಜೋಯ್ ಕೊರೆಯ ಸ್ವಾಗತಿಸಿ, ಅರುಣ ಡಿ. ಮಿನೇಜಸ್ ನಿರೂಪಿಸಿದರು. ಎಂಬಿಎ ವಿಭಾಗದ ಮುಖ್ಯಸ್ಥ ರುಚಿರ್ ಆನಂದ್ ವಂದಿಸಿದರು.

ಕೈಕಂಬ ಮೆಸ್ಕಾಂ ಇಲಾಖೆಯಲ್ಲಿ 34 ವರ್ಷದಿಂದ ಸೇವೆ ಸಲ್ಲಿಸಿದ ನಾರಾಯಣ ನಾಯ್ಕ ಅವರನ್ನು ದಂಪತಿ ಸಮೇತ ಕೈಕಂಬ, ಎಡಪದವು, ಮುಚ್ಚೂರು ಮೆಸ್ಕಾಂ ಶಾಖೆಯ ವತಿಯಿಂದ ಬುಧವಾರ ಕೈಕಂಬದಲ್ಲಿ ಸನ್ಮಾನಿಸಲಾಯಿತು. ಎಂ.ತಿಮ್ಮಪ್ಪ ಗೌಡ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ದಿನೇಶ್ , ಸೋಹನ್, ಜೆ.ಇ.ಗಳಾದ ಜಗೇಶ್‌ಮೂರ್ತಿ, ಜಾನ್‌ಬ್ಯಾಪ್ಟಿಸ್ಟ್ ಡಿಸೋಜ, ಸಂತೋಷ್ ಎಚ್., ಸತೀಶ್ ಶೆಟ್ಟಿ , ಶೇಖರ್ ಶೆಟ್ಟಿಗಾರ್ ಮೊದಲಾದವರು ಭಾಗವಹಿಸಿದ್ದರು.

ದತ್ತಿನಿಧಿ ಕಾರ್ಯಕ್ರಮ

ಮಂಗಳೂರು: ಅವಿಭಜಿತ ದ.ಕ.ಮತ್ತು ಕಾಸರಗೋಡು ಜಿಲ್ಲೆಯ ಕರಾವಳಿ ಲೇಖಕಿಯರ -ವಾಚಕಿಯರ ಸಂಘದ ವತಿಯಿಂದ ಪದ್ಮಾ ಶೆಣೈ ಮತ್ತು ಲಲಿತಾ ರೈ ದತ್ತಿನಿಧಿಗಳ ಕಾರ್ಯಕ್ರಮ ಹಾಗೂ ಬಹುಮಾನ ವಿತರಣೆ ನ.10ರಂದು ಮಂಗಳೂರು ಉರ್ವಸ್ಟೋರಿನಲ್ಲಿರುವ ಸಾಹಿತ್ಯ ಸದನದಲ್ಲಿ ನಡೆಯಲಿದೆ.

ದತ್ತಿನಿಧಿಗಳ ಕುರಿತು ಬಿ.ಎಂ.ರೋಹಿಣಿ ಮಾತನಾಡುವರು. ಪದ್ಮಾ ಶೆಣೈ ಮತ್ತು ಲಲಿತಾ ರೈ ಬಹುಮಾನ ವಿತರಿಸುವರು. ಅತಿಥಿಯಾಗಿ ಜಾನಪದ ವಿದ್ವಾಂಸ ಡಾ.ವಾಮನ ನಂದಾವರ ಭಾಗವಹಿಸುವರು. ಅಧ್ಯಕ್ಷತೆಯನ್ನು ಡಾ.ಸಬಿಹಾ ಭೂಮಿಗೌಡ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಸರಕಾರಿ ಸಂಯುಕ್ತ ಪ್ರೌಢಶಾಲೆ, ದ.ಕ.ಜಿ.ಪಂ.ಹಿರಿಯ ಪ್ರಾಥಮಿಕ ಶಾಲೆ ಕಿನ್ನಿಕಂಬಳ ಇಲ್ಲಿಯ ವಿದ್ಯಾರ್ಥಿಗಳು ಕೈಕಂಬ ಪೇಟೆಯಲ್ಲಿ ಮೆರವಣಿಗೆಯ ಮೂಲಕ ಸಾಗಿ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಿದರು.

ನ.10: ಬಿ.ಸಿ.ರೋಡಿನಲ್ಲಿ 'ಜನಸಿರಿ' ಸಮ್ಮೇಳನ

ಬಂಟ್ವಾಳ: ಬಿ.ಸಿ.ರೋಡಿನ ಸಾಧನಾ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಮ್ಮೂರ ಹಬ್ಬ 'ಜನಸಿರಿ -2112 ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನವು' ನ.10ರಂದು ಬಿ.ಸಿ. ರೋಡಿನ ಪದ್ಮನಾಭ ನಗರದಲ್ಲಿ ನಡೆಯಲಿದೆ. ಖ್ಯಾತ ಚಿತ್ರ ನಿರ್ದೇಶಕ ಪಿ.ಶೇಷಾದ್ರಿ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ ಎಂದು ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ.ಏರ್ಯ ಲಕ್ಷ್ಮೀನಾರಾಯಣ ಆಳ್ವ ಹೇಳಿದ್ದಾರೆ.

ಬಿ.ಸಿ.ರೋಡಿನಲ್ಲಿರುವ ಜನಸಿರಿ ಕಾರ್ಯಾಲಯದಲ್ಲಿ ಶನಿವಾರ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ನುಡಿ ಮಂಟಪದ ಅಧ್ಯಕ್ಷತೆ ವಹಿಸಲಿದ್ದಾರೆ. ಉದ್ಘಾಟನೆಯ ಬಳಿಕ ವಿಚಾರ ಮಂಟಪ ನಡೆಯಲಿದ್ದು, ಹಿರಿಯ ಪ್ರಾಧ್ಯಾಪಕ ಪ್ರೊ.ಎಂ. ರಾಮಚಂದ್ರ ಅಧ್ಯಕ್ಷತೆ ವಹಿಸುವರು. 'ಹಳ್ಳಿಮಂದಿ ಪೇಟೆ ಬದುಕು' ಕುರಿತು ಅಂಕಣಕಾರ ಡಾ.ನರೇಂದ್ರ ರೈ ದೇರ್ಲ, 'ಕುಟುಂಬ ಸಾಮರಸ್ಯ' ಕುರಿತು ವಿದ್ವಾಂಸ ಭಾಸ್ಕರ ನೆಲ್ಲಿತೀರ್ಥ ವಿಚಾರ ಮಂಡಿಸಲಿದ್ದಾರೆ. ಸಾಹಿತಿ ಡಾ. ನಾ.ದಾ.ಶೆಟ್ಟಿ ಅಧ್ಯಕ್ಷತೆ ವಹಿಸುವರು ಎಂದು ಅವರು ತಿಳಿಸಿದರು.

ಪೂರ್ವಾಹ್ನ ನಗೆ ಮಂಟಪವನ್ನು ಹಾಸ್ಯ ಲೇಖಕಿ ಸಂಧ್ಯಾ ಶೆಣೈ ಉಡುಪಿ ನಡೆಸಲಿದ್ದು, ವ್ಯಂಗ್ಯಚಿತ್ರ ಕಲಾವಿದ ಹರಿಣಿ ಹಾಸ್ಯ ರೇಖೆ ಬಿಡಿಸಲಿದ್ದಾರೆ. ಬಳಿಕ ವಿದ್ಯಾರ್ಥಿ ಲಹರಿ ನಡೆಯಲಿದ್ದು , ಯುವ ಕಲಾವಿದ ಮಣಿನಾಲ್ಕೂರು ನಡೆಸಿಕೊಡಲಿದ್ದಾರೆ. ಗಾಯಕಿ ಡಾ. ಪ್ರತಿಭಾ ಎಸ್.ರೈ ಹಾಗೂ ಸಹ ಕಲಾವಿದರಿಂದ 'ಸವಿಸವಿ ನೆನಪು' ಎಂದೂ ಮರೆಯದ ಹಾಡು ಕಾರ್ಯಕ್ರಮ ನಡೆಯಲಿದೆ ಎಂದರು.

ಸಂಜೆ ನಡೆಯುವ ನುಡಿ ನಮನದ ಅಧ್ಯಕ್ಷತೆಯನ್ನು ಕಸಾಪ ಜಿಲ್ಲಾಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ ವಹಿಸಲಿದ್ದು , ಸಾಂಸ್ಕೃತಿಕ ಸಂಘಟಕ ಕೆ.ಮೋಹನ ರಾವ್ ನುಡಿನಮನ ಸಲ್ಲಿಸಲಿದ್ದಾರೆ. ಉಪನ್ಯಾಸಕ ಸುರೇಶ್ ನಂದೊಟ್ಟು, ನ್ಯಾಯವಾದಿ ಕಜೆ ರಾಮಚಂದ್ರ ಭಟ್ ಅನಿಸಿಕೆ ವ್ಯಕ್ತಪಡಿಸಲಿದ್ದಾರೆ. ಬಳಿಕ ಗಾನಸುಧಾ ಸಂಗೀತ ವೈಭವ ಕಾರ್ಯಕ್ರಮವನ್ನು ಕಲಾವಿದರಾದ ಮೈಮ್ ರಾಮದಾಸ್ ಮತ್ತು ಕಲಾವತಿ ಉಡುಪಿ ಹಾಗೂ ತಂಡದವರು ನಡೆಸಿಕೊಡಲಿದ್ದಾರೆ ಎಂದು ಡಾ.ಏರ್ಯ ವಿವರಿಸಿದರು.

ಬಂಟ್ವಾಳ ವಲಯ ಛಾಯಾಗ್ರಾಹಕ ಸಂಘದ ಸಂಯೋಜನೆಯಲ್ಲಿ 'ಬದುಕು' ವಿಷಯಾಧರಿತ ಛಾಯಾಚಿತ್ರ ಪ್ರದರ್ಶನ ನಡೆಯಲಿದ್ದು , ಕನ್ನಡ ಸಾಹಿತ್ಯ ಪರಿಷತ್ ಮತ್ತು ಚುಟುಕು ಸಾಹಿತ್ಯ ಪರಿಷತ್ ಸಂಯೋಜನೆಯಲ್ಲಿ ಪುಸ್ತಕ ಮಳಿಗೆಗಳ ಪ್ರದರ್ಶನಗೊಳ್ಳಲಿದೆ. ಬಂಟ್ವಾಳ ಪರಿಸರವನ್ನು ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯವನ್ನಾಗಿಸುವಲ್ಲಿ ಜನತೆ ಪಾಲ್ಗೊಳ್ಳಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನ ಅಧ್ಯಕ್ಷ ವಿಶ್ವನಾಥ್ ಬಂಟ್ವಾಳ, ಕಾರ್ಯದರ್ಶಿ ಫಾರೂಕ್ ಬಂಟ್ವಾಳ, ಸಂಘಟಕರಾದ ಅಶೋಕ ಶೆಟ್ಟಿ ಸರಪಾಡಿ, ಡಿ.ಎಂ.ಕುಲಾಲ್, ಸೋಮಶೇಖರ್ ತುಂಬೆ, ಪುರುಷೋತ್ತಮ ಪಾಲ್ಗೊಂಡಿದ್ದರು.

ರೋಟರಿ ಸಂಸ್ಥೆಯ ಪ್ರತಿಷ್ಠೆ ಪ್ರತಿಬಿಂಬಿಸಿ

ಮಂಗಳೂರು: ರೋಟರಿ ಸದಸ್ಯರು ಸಮಾಜಾಭಿವೃದ್ಧಿ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ರೋಟರಿ ಸಂಸ್ಥೆಯ ಪ್ರತಿಷ್ಠೆಯನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಪ್ರತಿಬಿಂಬಿಸಲು ಶಕ್ತಿಮೀರಿ ಶ್ರಮಿಸಬೇಕು ಎಂದು ರೋಟರಿ ಜಿಲ್ಲಾ ಗವರ್ನರ್ ಡಾ.ಬಿ.ದೇವದಾಸ ರೈ ಕರೆ ನೀಡಿದ್ದಾರೆ.

ಅವರು ಹೋಟೆಲ್ ಓಷಿಯನ್ ಪರ್ಲ್ ಸಭಾಂಗಣದಲ್ಲಿ ಜರಗಿದ ಸಭೆಗೆ ಅಧಿಕೃತ ಭೇಟಿ ನೀಡಿ, ಸದಸ್ಯರನ್ನುದ್ದೇಶಿಸಿ ಮಾತನಾಡಿದರು.

ಸಮಾಜ ಸೇವಕ ಸಾಯಿರಾಮ್ ಭಟ್, ಉಪ ಪೊಲೀಸ್ ಅಧೀಕ್ಷಕ ಹರೀಶ್ಚಂದ್ರ ಅವರನ್ನು ಗೌರವಿಸಲಾಯಿತು.

ಗೌರವ ಅತಿಥಿಯಾಗಿದ್ದ ರೋಟರಿ ಸಹಾಯಕ ಗವರ್ನರ್ ಸದಾಶಿವ ಶೆಟ್ಟಿ , ನಂದಿನಿ ರಘುಚಂದ್ರನ್ ಸಂಪಾದಕತ್ವದ ಸಂಸ್ಥೆಯ ಗೃಹ ವಾರ್ತಾಪತ್ರಿಕೆ 'ರೋಟರೋಸ್' ಬಿಡುಗಡೆಗೊಳಿಸಿದರು.

ಈ ಸಂದರ್ಭ ರೋಟರಿ ಸಂಸ್ಥೆಯ ವೃತ್ತಿಪರ ಸೇವಾ ಯೋಜನೆಯ ಅಭಿಯಾನದ ಅಂಗವಾಗಿ ಸಮಾಜದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ಕಾಸರಗೋಡು ಮೂಲದ ಹಿರಿಯ ಸಮಾಜ ಸೇವಕ ಸಾಯಿರಾಮ್ ಭಟ್ ಅವರನ್ನು ಸನ್ಮಾನಿಸಲಾಯಿತು. ಪೊಲೀಸ್ ಇಲಾಖೆಯಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿದ ಉಪ ಪೊಲೀಸ್ ಅಧೀಕ್ಷಕ ಹರೀಶ್ಚಂದ್ರ ಅವರನ್ನು ಗೌರವಿಸಲಾಯಿತು.

ಸತೀಶ್ ಬೋಳಾರ್ ವೇದಿಕೆಯಲ್ಲಿದ್ದರು. ಇದೇ ವೇಳೆ ಸಮಾಜ ಸೇವಾ ಅಭಿಯಾನದ ಅಂಗವಾಗಿ ಮಂಗಳಜ್ಯೋತಿ ಶಾಲೆಯ ಸದಸ್ಯರಾದ ಶೋಭಾ ಮತ್ತು ಸುನೀತಾ ಅವರಿಗೆ ಸ್ವ-ಉದ್ಯೋಗ ಯೋಜನೆಯ ಅಂಗವಾಗಿ 2 ಹೊಲಿಗೆ ಯಂತ್ರವನ್ನು ದಾನವಾಗಿ ನೀಡಲಾಯಿತು.

ಗುರುದಾಸ ಕರ್ಕೇರ ಸ್ವಾಗತಿಸಿ, ಕಾರ್ಯದರ್ಶಿ ಜಗದೀಶ್ ವರದಿ ಮಂಡಿಸಿದರು. ಚುನಾಯಿತ ಅಧ್ಯಕ್ಷ ಜಗದೀಶ್ ಶೆಟ್ಟಿ ವಂದಿಸಿದರು.


ಅತ್ಯುತ್ಕೃಷ್ಟ ಗುಣಮಟ್ಟದ ದೀರ್ಘ ಬಾಳಿಕೆಯ ಪೈಪ್
ಶ್ರೀ ಕೃಷ್ಣ ಪೈಪ್
ರಿಜಿಡ್ ಪಿ.ವಿ.ಸಿ.
ತಯಾರಕರು:
ಶ್ರೀ ಕೃಷ್ಣ ಪೈಪ್ ಇಂಡಸ್ಟ್ರೀಸ್, ಕರ್ಕಿ, ಹಟ್ಟಿಯಂಗಡಿ, ಕುಂದಾಪುರ, ಉಡುಪಿ ಜಿಲ್ಲೆ. ಫೋನ್: (08254) 271261, 271361,(R). 284361, 264444 (Factory)
Sindhu Grafiks